**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ ಸಿ ನಂ. 84/2025**

ಫಿರ್ಯಾದುದಾರರು ಸರ್ಕಾರದ ಪರವಾಗಿ ಗುಂಡ್ಲುಪೇಟೆ ಪೋ. ಠಾಣೆ

ವಿರುದ್ಧ

ಆರೋಪಿಗಳುಃ

1. ಶಿವನಂಜಯ್ಯ ಬಿನ್ ಲೇಟ್ ಮಹಲಿಂಗಯ್ಯ, 69 ವರ್ಷ
2. ಸುನಿಲ್ ಬಿನ್ ಶಿವನಂಜಯ್ಯ, 33 ವರ್ಷ
3. ಅನಿಲ್ ಬಿನ್ ಶಿವನಂಜಯ್ಯ, 32 ವರ್ಷ
4. ಈರಮ್ಮ ಕೊಂ ಶಿವನಂಜಯ್ಯ, 55 ವರ್ಷ
5. ಸರೋಜಮ್ಮ ಕೊಂ ಸುನಿಲ್, 33 ವರ್ಷ
6. ಪ್ರಮೋದಿನಿ @ ಸಿರಿ ಕೋಂ ಅನಿಲ್, 22 ವರ್ಷ
7. ಪ್ರಪುಲ್ಲ ಕೋಂ ಶಂಕರ, 24 ವರ್ಷ
8. ಶಂಕರ ಬಿನ್ ಶಿವನಂಜಯ್ಯ, 35 ವರ್ಷ

ಎಲ್ಲರ ವಾಸಃಅಂಬೇಡ್ಕರ್ ಬೀದಿ,
ಕಿಲಗೆರೆ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು.
ಚಾಮರಾಜನಗರ ಜಿಲ್ಲೆ.

**ದೋಷಾರೋಪಣೆ**

ಶ್ರೀನೂರುನ್ನೀಸ, ಬಿ.ಎ., ಎಲ್ ಎಲ್ ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ.ದಂ ಗಳು ಗುಂಡ್ಲುಪೇಟೆ ಆದ ನಾನು ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗಳಿಗೆ ಗುರಿಪಡಿಸುತ್ತೇನೆ.

ದಿಃ 13.12.2024 ರಂದು ರಾತ್ರಿ 10.00 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ಪೊಲೀಸ್ ಠಾಣೆ ಸರಹದ್ದು ಕಿಲಗೆರೆ ಗ್ರಾಮದ ಚಾಸಾ-1 ಚೆನ್ನಮ್ಮ ಮತ್ತು ಚಾಸಾ-2 ಕೆ ಸಿ ನಾಗರಾಜು ರವರು ತಮ್ಮ ಮನೆಯಲ್ಲಿ ಇದ್ದು, ತಮ್ಮ ಮಕ್ಕಳಾದ ಚಾಸಾ-3 ಪ್ರಕಾಶ ಮತ್ತು ಚಾಸಾ-4 ಮಣಿಕಂಠ ರವರಿಗೆ ಇನ್ನು ಮುಂದೆ ಮನೆಯ ಜವಾಬ್ದಾರಿ ತೆಗೆದುಕೊಂಡು ಚೆನ್ನಾಗಿ ಕೆಲಸ ಮಾಡಿ ಬದುಕನ್ನು ಕಟ್ಟಿಕೊಳ್ಳುವ ಬಗ್ಗೆ ಬುದ್ದಿವಾದ ಹೇಳುತ್ತಿದ್ದಾಗ ಚಾಸಾ-2 ಕೆ ಸಿ ನಾಗರಾಜು ರವರ ಎದುರು ಮನೆಯಲ್ಲಿನ 1 ರಿಂದ 8ನೇ ಆರೋಪಿಗಳಾದ ನೀವುಗಳು ಚಾಸಾ-2 ಕೆ ಸಿ ನಾಗರಾಜು ರವರ ಮನೆಯ ಮುಂದೆ ಅಕ್ರಮವಾಗಿ ಗುಂಪುಕಟ್ಟಿಕೊಂಡು ಬಂದು ಅದರ ಸದಸ್ಯರಾಗಿರುತ್ತಿರೆಂದು, ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ 189(2) ಸಹವಾಚಕ 190 ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿಗಳಾದ ನೀವುಗಳು ಏಕ್ಕೋದ್ದೇಶದಿಂದ ಚಾಸಾ-2 ಕೆ ಸಿ ನಾಗರಾಜು ರವರ ಕುಟುಂಬದವರಿಗೆ ಬೈಯುತ್ತಿದ್ದಾಗ,

ಚಾಸಾ–2 ಕೆ.ಸಿ. ನಾಗರಾಜು ರವರು ಮನೆಯಿಂದ ಆಚೆ ಬಂದು 1ನೇ ಆರೋಪಿಯಾದ ನಿಮಗೆ ಏಕೆ ನಮ್ಮ ಮನೆ ಮುಂದೆ ಬಂದು ನಮ್ಮಗಳನ್ನು ಏಕೆ ಬೈಯುತ್ತಿದ್ದೀರಿ ಎಂದು ಕೇಳಿದ್ದಕ್ಕೆ ನೀವು ಚಾಸಾ–2 ಕೆ.ಸಿ. ನಾಗರಾಜು ರವರ ಕುತ್ತಿಗೆ ಪಟ್ಟಿಯನ್ನು ಹಿಡಿದು ಮುಂದೆ ಹೋಗದಂತೆ ತಡೆ ಮಾಡಿರುತ್ತೀರೆಂದು ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ 126(2) ಸಹವಾಚಕ 190 ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿಗಳಾದ ನೀವುಗಳು ಏಕೋದ್ದೇಶದಿಂದ ಚಾಸಾ–2 ಕೆ ಸಿ ನಾಗರಾಜು ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ನಿಮ್ಮಗಳ ಪೈಕಿ 1ನೇ ಆರೋಪಿಯಾದ ನೀವು ಕೈಗಳಿಂದ ಚಾಸಾ–2 ಕೆ.ಸಿ. ನಾಗರಾಜು ರವರ ಕಪಾಲಕ್ಕೆ ಹೊಡೆದಿರುತ್ತೀರೆಂದು ಹಾಗೂ ಚಾಸಾ–1 ಚಿನ್ನಮ್ಮ ಮತ್ತು ಚಾಸಾ–4 ರವರು ಬಿಡಿಸಲು ಬಂದಾಗ 2ನೇ ಆರೋಪಿಯಾದ ನೀವು ಚಾಸಾ–2 ಕೆ ಸಿ ನಾಗರಾಜು ರವರನ್ನು ಕೆಳಕ್ಕೆ ಕೆಡವಿಕೊಂಡು ಅವರ ಎದೆಯ ಎಡಭಾಗಕ್ಕೆ ಕೈಯಿಂದ ಮುಷ್ಟಿಕಟ್ಟಿ ಗುದ್ದಿದ್ದು ಮತ್ತು ಕಾಲಿನಿಂದ ಅವರ ಹೊಟ್ಟೆಯ ಭಾಗಕ್ಕೆ ಒದ್ದು ನೋವುಂಟುಪಡಿಸಿರುತ್ತೀರೆಂದು ಹಾಗೂ ಬಿಡಿಸಲು ಬಂದ ಚಾಸಾ–1 ಚಿನ್ನಮ್ಮ ರವರಿಗೆ 4 ರಿಂದ 7 ನೇ ಆರೋಪಿಗಳಾದ ನೀವು ಕೈಗಳಿಂದ ಹೊಡೆದು ನೋವುಂಟುಪಡಿಸಿರುತ್ತೀರೆಂದು ಹಾಗೂ ಬಿಡಿಸಲು ಬಂದ ಚಾಸಾ–3 ಪ್ರಕಾಶ ಮತ್ತು ಚಾಸಾ–4 ಮಣಿಕಂಠ ರವರನ್ನು 2 ಮತ್ತು 3 ನೇ ಆರೋಪಿಗಳಾದ ನೀವು ಚರಂಡಿಗೆ ತಳ್ಳಿ ಬೀಳಿಸಿರುತ್ತೀರೆಂದು ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ 115(1) ಸಹವಾಚಕ 190 ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ನಾಲ್ಕನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿಗಳಾದ ನೀವುಗಳು ಏಕೋದ್ದೇಶದಿಂದ ಚಾಸಾ–1 ಚಿನ್ನಮ್ಮ ಮತ್ತು ಚಾಸಾ–2 ಕೆ ಸಿ ನಾಗರಾಜು ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ನಿಮ್ಮಗಳ ಪೈಕಿ 3ನೇ ಆರೋಪಿಯಾದ ನೀವು ಮನೆಯಿಂದ ಒಂದು ಕಬ್ಬಿಣದ ರಾಡನ್ನು ತೆಗೆದುಕೊಂಡು ಬಂದು ಚಾಸಾ–2 ಕೆ ಸಿ ನಾಗರಾಜು ರವರ ಬಲಕೈಗೆ ಹೊಡೆದು ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರೆಂದು ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ 118(2) ಸಹವಾಚಕ 190 ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಕೊನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿಗಳಾದ ನೀವುಗಳು ಏಕೋದ್ದೇಶದಿಂದ ಚಾಸಾ–1, ಚಿನ್ನಮ್ಮ, ಚಾಸಾ–2 ಕೆ ಸಿ ನಾಗರಾಜು, ಚಾಸಾ–3 ಪ್ರಕಾಶ, ಚಾಸಾ–4 ಮಣಿಕಂಠ ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ಈ ದಿನ ನೀವು ಬದುಕಿಕೊಂಡಿದ್ದೀರಿ ಇಲ್ಲದಿದ್ದರೆ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ

ಹಾಕಿರುತ್ತಿರೇಂದು, ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ 351(2) ಸಹವಾಚಕ 190 ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೇಲ್ಕಂಡ ಅಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುವುದಾಗಿ ಈ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ
ಗುಂಡ್ಲುಪೇಟೆ